ಜಾಕೋಬ್ ಡಿಸೋಜ, ಕುರುವಳ್ಳಿ
*ಹೇಳಿದ್ದನ್ನು ಮಾಡಬೇಕು; ಮಾಡಿದ್ದನ್ನು ಹೇಳಬಾರದು. ಹಾಗೆಂದರೆ ಏನು ಸಾರ್?*



ರೆಸಾರ್ಟ್ ಸೇರಿ ಸೂಟ್‌ಕೇಸ್ ಪಡೆ ಎಂದರೆ ಪಡೆಯಬೇಕು. ಹಾಗೆ ಮಾಡಿದ್ದನ್ನು ಮಾಧ್ಯಮಕ್ಕೆ ಹೇಳಬಾರದು ಎಂದು.

ವ. ಉಮೇಶ ಕಾರಂತ, ಮಂಗಳೂರು
*ಭಾಷಣದ ಕೊನೆಯಲ್ಲಿ 'ಮುಕ್ತಾಯಗೊಳಿಸುತ್ತೇನೆ' ಎಂದು ಹೇಳುವುದೇಕೆ?*
ಸಭಿಕರಿಗೆ ಸಂತೋಷ ತರುವ ಕನಿಷ್ಠ ಒಂದು ವಾಕ್ಯವನ್ನಾದರೂ ನುಡಿಯುವ ಹಂಬಲ!

ಮಲ್ಲಿಕಾರ್ಜುನ ಗಚ್ಚಿ, ಗೋಗಿ
*ಎಂದಾದರೊಮ್ಮೆ ನಶ್ವರವಾಗುವ ಈ ದೇಹಕ್ಕೆ ಏಕಿಷ್ಟು ವ್ಯಾಮೋಹ ಸರ್?*
ಪೆಟ್ರೋಲ್ ಮುಗಿದಾಗ ವಾಹನ ನಿಲ್ಲಲಿ; ಆದರೆ ಅಲ್ಲಿಯವರೆಗೆ ಟೈರು ಟ್ಯೂಬು ಅತ್ಯವಶ್ಯವಲ್ಲವೆ!

ಎಂ.ಎ. ಕುಮಾರ್, ಬೆಂಗಳೂರು
*ಸ್ವರ್ಗಕ್ಕೆ, ನರಕಕ್ಕೆ ಹೋಗಿ ಬಂದವರು ಯಾರೂ ಇಲ್ಲವಾ ರಾಮ್?*



ನಾನೇ ಇದ್ದೇನಲ್ಲ. ಮೊನ್ನೆ ಬೆಳಗ್ಗೆ ಮಕ್ಕಳ ಉದ್ಯಾನಕ್ಕೆ, ಸಂಜೆ ಸರ್ಕಾರಿ ಆಸ್ಪತ್ರೆಗೆ ಹೋಗಿಬಂದೆ.

ವಿ. ಹಮೀದ್, ವಿಟ್ಲ
*ನನ್ನ ಲವರ್ ಕಲರ್ ಟಿವಿಯನ್ನೇ ಹೆಚ್ಚು ಇಷ್ಟಪಡುತ್ತಾಳೆ. ಏಕೆ?*
ಅನೌನ್ಸರ್, ನ್ಯೂಸ್ ರೀಡರ್‌ಗಳ ಬಣ್ಣಬಣ್ಣದ ಮೇಕಪ್, ಮ್ಯಾಚಿಂಗ್ ಡ್ರೆಸ್‌ಗಳನ್ನು ಸ್ಟಡಿ ಮಾಡಲು.

ಎಂ.ಕೆ. ಗಿರೀಶ್, ಬಸವಾಪಟ್ಟಣ
*ಗಳಿಕೆ, ಉಳಿಕೆ, ವ್ಯಯಿಸುವಿಕೆ - ಇವುಗಳಲ್ಲಿ ಯಾವುದರ ಪಾಲು ಎಷ್ಟಿದ್ದರೆ ಬಾಳು ಚೆನ್ನಾಗಿರುತ್ತೆ ಸರ್?*
ಗೌರವದ ಗಳಿಕೆ, ಆರೋಗ್ಯದ ಉಳಿಕೆ, ದುರ್ನಡೆಗಳ ವ್ಯಯಿಸುವಿಕೆಗೆ ಪೂರಕವಾಗಿರುವಷ್ಟು.

ಕೆ.ಯಂ. ವೀರೇಶ್, ಕೂಡ್ಲಿಗಿ
*ವಿದ್ಯೆಯಿಂದ ಶ್ರೀಮಂತರಾದವನು ರಾಜಕಾರಣಿ ಆಗುವುದಿಲ್ಲ. ಏಕೆ?*
ವಿದ್ಯೆ ಮರ್ಯಾದೆಯಿಂದ ಜೀವನ ನಡೆಸುವುದನ್ನು ಕಲಿಸುವ ಏಕೈಕ ಕಾರಣ.

ಅಂಬಿಕಾ ಮಂಜುನಾಥಸ್ವಾಮಿ, ಭದ್ರಾವತಿ
*ರಾಜಕಾರಣಿಗಳ ಮಗ/ಮಗಳನ್ನು ಕಡ್ಡಾಯವಾಗಿ ಸೇನೆಗೆ ಸೇರಿಸಬೇಕೆಂದು ಸಾಮಾನ್ಯರು ಆಗ್ರಹಿಸಿದರೆ?*
ಸೇರಿಸುತ್ತಾರೆ – ಕನ್ನಡಸೇನೆ, ಶಿವಸೇನೆ, ಉಟ್ಟು ಓರಾಟಗಾರರ ಸೇನೆ, ಇತ್ಯಾದಿಗಳಿಗೆ.

ಹೆಚ್.ವಿ. ಶ್ರೀಧರ್, ಬೆಂಗಳೂರು
*ಮದುವೆ, ಮುಂಜಿಗಳಿಗೆ ಊಟಕ್ಕೆ ಕರೆಯುವಂತೆ ವಿಚ್ಛೇದನವಾದಾಗ ಏಕೆ ಊಟಕ್ಕೆ ಕರೆಯುವುದಿಲ್ಲ?*
ಏಕೆಂದರೆ ಕೇಸ್ ಖರ್ಚು ಕಳೆದ ಮೇಲೆ ಇಬ್ಬರ ಬಳಿಯೂ ತಮ್ಮ ತಮ್ಮ ಊಟಕ್ಕೂ ಹಣ ಉಳಿದಿರುವುದಿಲ್ಲವಂತೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ರಾಮಾಯಣ, ಮಹಾಭಾರತದ ಕಾಲದಲ್ಲಿ ಸಿಸಿ ಕ್ಯಾಮರಾ ಇದ್ದಿದ್ದರೆ?*
ಶಕುನಿ ಅದರ ಮೇಲೆ ಶಾಲು ಹೊದೆಸಿ ತನ್ನ ಕೆಲಸ ಮುಂದುವರೆಸುತ್ತಿದ್ದ.

ಟಿ.ಎಂ. ಮಾನಪ್ಪ, ಶಿವಮೊಗ್ಗ
*ಮಕ್ಕಳಿಗೆ ಪುಸ್ತಕ ಹಿಡಿದರೆ ತೂಕಡಿಕೆ; ಶಾಸಕರಿಗೆ ಅಸೆಂಬ್ಲಿ ಸೇರಿದರೆ ಆಕಳಿಕೆ. ಏಕೆ ಹೀಗೆ?*
ಮಕ್ಕಳನ್ನು ಪಾಠಗಳಿಂದ, ಅಸೆಂಬ್ಲಿಯನ್ನು ಶಾಸಕರಿಂದ ಕಾಪಾಡಲು ನಿದ್ರಾದೇವಿ ಹೂಡುವ ಅಸ್ತ್ರಗಳು ಅವು.

ಬಿ.ಎಂ. ಶಿವಲಿಂಗೇಗೌಡ, ಬೇವಿನಹಳ್ಳಿ
*ಕೆಲವು ವೈದ್ಯರು ಬೇಗ ಯಮನ ಬಳಿ ಕಳುಹಿಸುತ್ತಾರೆ. ಆದರೆ ವಕೀಲರು ಏಕೆ ವರ್ಷವಿಡೀ ಅಲೆಸುತ್ತಾರೆ?*
ವೈದ್ಯರಲ್ಲಿ ಕೇಸ್ ಕ್ಲೋಸ್ ಆದರೂ ಫೀಸ್ ಬರುತ್ತದೆ; ವಕೀಲರಿಗೆ ಕಕ್ಷಿ ಸತ್ತರೆ ಫೀಸೂ ಗೊಟಕ್.

## ಬಹುಮಾನಿತ ಪ್ರಶ್ನೆ

ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ
*ಗಗನಸಖಿಗೂ, ಪ್ರೇಮಸಖಿಗೂ ಇರುವ ವ್ಯತ್ಯಾಸವೇನು ಶಿವಾ?*
ಗಗನಸಖಿ 'ವಿಮಾನ ಬಿದ್ದರೆ....' ಎಂದರೆ 'ಛಿ! ಅಪಶಕುನ! ಮುಚ್ಚು ಬಾಯಿ' ಎನ್ನದೆ ಕೇಳಿಸಿಕೊಳ್ಳುತ್ತೇವೆ.

ವಿ.ಎಸ್. ಹಿಂದೂಪುರ, ಬಳ್ಳಾರಿ
*ದೇವಸ್ಥಾನದ ಬಾಗಿಲು ಹಾಕಿದಾಗ ದೇವ ಒಳಗಿರುತ್ತಾನಂತೆ; ತೆರೆದಾಗ ಹೊರಗಿರುತ್ತಾನಂತೆ. ಹೌದೆ ಸ್ವಾಮಿ?*
ಹೌದು. ಲೋಕವ್ಯವಹಾರ ನಡೆಸುವವನಿಗೆ ಗುಡಿಯಲ್ಲಿನ ಲೋಕಲ್ ವ್ಯವಹಾರಗಳನ್ನು ಕಂಡರೆ ಅಲರ್ಜಿಯಂತೆ.

ಡಿ.ಎಸ್. ಪಂಕಜಸುಬ್ರಮಣ್ಯ, ಬೆಂಗಳೂರು
*ಗುರುವೇ, ಸಿಎಂ ಆಪ್ತರಾಗಲು ಏನೇನು ಅರ್ಹತೆಗಳಿರಬೇಕು...?*
ಛಿ! ಅವೆಲ್ಲ ಸಭ್ಯರು ಮಾತನಾಡಿಕೊಳ್ಳುವ ವಿಷಯಗಳಲ್ಲ. ಥುಪ್!

ಬಾ.ರಂ. ಸುರೇಶ, ಶಿವಮೊಗ್ಗ
*ಸಮುದ್ರದಲ್ಲಿ ಸಿಗುವ ಮುತ್ತಿಗೂ, ಹೆಣ್ಣಿನಿಂದ ಪಡೆವ ಸಿಹಿಮುತ್ತಿಗೂ ಏನು ವ್ಯತ್ಯಾಸ?*



ಸಮುದ್ರದ ಮುತ್ತನ್ನು ಎಲ್ಲರೆದುರೂ ವಿನಿಮಯ ಮಾಡಿಕೊಳ್ಳಬಹುದು.

ಹೆಚ್. ಗೋಪಿನಾಥ್, ಬಳ್ಳಾರಿ
*ಲವ್ ಮ್ಯಾರೇಜ್ ಒಳ್ಳೆಯದೋ, ಅರೇಂಜ್ಡ್ ಮ್ಯಾರೇಜ್ ಒಳ್ಳೆಯದೋ?*
ಮುಖ್ಯವಾಗಿ ಮ್ಯಾರೇಜ್ ಬಗ್ಗೆ ಲವ್ ಇರುವುದು ಒಳ್ಳೆಯದು.

ಅನಂತಪದ್ಮನಾಭ ಹೆಚ್.ಎಂ. ಮೈಸೂರು
*ಬದುಕಿಗೂ, ಬಂದೂಕಿಗೂ ಏನು ಸಾಮ್ಯ?*
ಎರಡರಲ್ಲೂ ನೋಸ್ ಬ್ಲಾಕ್ ಆದರೆ ಅಪಾಯ; ಢಂ ಎಂದಮೇಲೆ ಹೊಗೆ ಖಚಿತ!

■ ರಾಮ್